

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 15-03-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಪ್ರಸ್ತಾಪಿಸುವ ಸಹಾಬರಲ್ಲಿ ಮೊದಲನೆಯವರು ಹಝ್ರತ್ ಸಾಯಿಬ್ ಬಿನ್ ಉಸ್ಮಾನ್ ರಝಿಯಲ್ಲಾಹು ಅನ್‌ಹು. ಅವರು ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್ ರಝಿಯಲ್ಲಾಹು ಅನ್‌ಹುರವರ ಪುತ್ರರಾಗಿದ್ದರು. ಅವರ ತಾಯಿಯ ಹೆಸರು ಹಝ್ರತ್ ಖೌಲ ಬಿನ್ತ್ ಹಕೀಮ್. ಇಸ್ಲಾಮಿನ ಆರಂಭ ಕಾಲದಲ್ಲಿಯೇ ಅವರು ಮುಸ್ಲಿಮರಾದರು. ಅವರು ತನ್ನ ಪಿತ ಮತ್ತು ಚಿಕ್ಕಪ್ಪ ಹಝ್ರತ್ ಖುದ್ದಾಮರೊಂದಿಗೆ ಅಬಿಸೀನಿಯಾ ದೇಶಕ್ಕೆ ವಲಸೆ ಹೋದ ದ್ವಿತೀಯ ತಂಡದಲ್ಲಿ ಸೇರಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಿಲ್ಲುಗಾರರಾದ ಸಹಾಬರಲ್ಲಿ ಅವರು ಗಣಿಸಲ್ಪಡುತ್ತಾರೆ. ಅವರು ಬದರ್, ಉಹುದ್, ಖಂದಕ್ ಮತ್ತು ಇತರ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಭಾಗವಹಿಸಿದರು. ಬವಾತ್ ಯುದ್ಧದ ಕಾಲದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಮದೀನದ ಅಮೀರರನ್ನಾಗಿ ನೇಮಿಸಿದ್ದರು. ಬವಾತ್ ಯುದ್ಧ ಹಿಜರಿ ವರ್ಷ 2ರಲ್ಲಿ ನಡೆಯಿತು. ಬವಾತ್ ಎಂಬುದು ಮದೀನದಿಂದ ನಲ್ವತ್ತೆಂಟು ಮೈಲು ದೂರದಲ್ಲಿರುವ ಜಹೀನ ಗೋತ್ರದ ಪರ್ವತದ ಹೆಸರಾಗಿದೆ. ಹಝ್ರತ್ ಸಾಯಿಬ್ ಬಿನ್ ಉಸ್ಮಾನ್(ರ) ಯಮಾಮ ಯುದ್ಧದಲ್ಲಿಯೂ ಭಾಗವಹಿಸಿದ್ದರು. ಯಮಾಮ ಯುದ್ಧ ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ಖಿಲಾಫತ್ ಕಾಲದಲ್ಲಿ ಹಿಜರಿ 12ರಲ್ಲಿ ನಡೆಯಿತು. ಆ ಯುದ್ಧದಲ್ಲಿ ಅವರಿಗೆ ಒಂದು ಬಾಣ ನಾಟಿತ್ತು. ಆ ಕಾರಣದಿಂದ ಅನಂತರ ಅವರು ನಿಧನ ಹೊಂದಿದರು. ಆಗ ಅವರ ಪ್ರಾಯ ಮೂವತ್ತು ವರ್ಷಕ್ಕಿಂತ ಸ್ವಲ್ಪ ಹೆಚ್ಚಾಗಿತ್ತು.

ಮುಂದಿನ ಸಹಾಬಿಯ ಹೆಸರು ಹಝ್ರತ್ ಝುಮ್ರ ಬಿನ್ ಅಮರ್ ಜಹ್‌ನೀ(ರ). ಅವರು ಬನೂ ತರೀಫ್ ಗೋತ್ರದ ಜೊತೆಗೆ ಪ್ರತಿಜ್ಞಾ ಬದ್ಧರಾಗಿದ್ದರು. ಬೇರೆ ಕೆಲವರ ಪ್ರಕಾರ ಅವರು ಬನೂ ಸಾಯಿದ ಗೋತ್ರದೊಂದಿಗೆ ಪ್ರತಿಜ್ಞಾ ಬದ್ಧರಾಗಿದ್ದರು. ಅದು ಸಅದ್ ಬಿನ್ ಉಬಾದರ ಗೋತ್ರವಾಗಿತ್ತು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಅವರು ಶಹೀದರಾದರು.

ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಸಅದ್ ಬಿನ್ ಸಹೀಲ್ ರಝಿಯಲ್ಲಾಹು ಅನ್‌ಹು. ಅವರು ಅನ್‌ಸಾರಿಯಾಗಿದ್ದರು. ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಅವರು ಭಾಗವಹಿಸಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಸಅದ್ ಬಿನ್ ಉಬೈದ್(ರ). ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ಖಾರೀ ಎಂಬ ಬಿರುದು ಗಳಿಸಿದ್ದರು. ಅವರ ಉಪನಾಮ ಅಬೂ ಝೈದ್ ಎಂದು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತ ಕಾಲದಲ್ಲಿ ಪವಿತ್ರ ಖುರ್‌ಆನನ್ನು ಜಮಾಯಿಸಿದ ನಾಲ್ಕು ಅನ್‌ಸಾರ್ ಸಹಾಬರಲ್ಲಿ ಅವರು ಒಬ್ಬರಾಗಿದ್ದರು. ಅವರ ಪುತ್ರ ಉಮೈರ್ ಬಿನ್ ಸಅದ್, ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರವರ ಖಿಲಾಫತ್ ಕಾಲದಲ್ಲಿ ಸಿರಿಯಾ ದೇಶದ ಒಂದು ಭಾಗದ ಆಡಳಿತಾಧಿಕಾರಿಯಾಗಿದ್ದರು. ಒಂದು ವರದಿ ಪ್ರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತ ಕಾಲದಲ್ಲಿ ಹಝ್ರತ್ ಸಅದ್ ಬಿನ್ ಉಬೈದ್ ಮಸ್‌ಜಿದ್ ಖುಬಾದಲ್ಲಿ ಇಮಾಮರಾಗಿ ನೇಮಿಸಲ್ಪಟ್ಟಿದ್ದರು. ಹಝ್ರತ್ ಅಬೂಬಕರ್ ಸಿದ್ದೀಖ್(ರ), ಹಝ್ರತ್ ಉಮರ್(ರ)ರವರ ಕಾಲದಲ್ಲೂ ಅವರು ಆ ಮಸ್‌ಜಿದ್‌ನಲ್ಲಿ ಇಮಾಮರಾಗಿದ್ದರು. ಅವರು ಹಿಜರಿ ವರ್ಷ 16ರಲ್ಲಿ ಖಾದಿಸಿಯ ಯುದ್ಧದಲ್ಲಿ ಶಹೀದರಾದರು. ಆಗ ಅವರ ಪ್ರಾಯ 64 ಆಗಿತ್ತು. ಅಬ್ದುರ್ರಹ್ಮಾನ್ ಬಿನ್ ಅಬೂ ಲೈಲಾ ವರದಿ ಮಾಡುತ್ತಾರೆ, ಹಿಜರಿ ವರ್ಷ 13ರಲ್ಲಿ ಜಸದ್ ಯುದ್ಧ ನಡೆಯಿತು. ಅದರಲ್ಲಿ ಮುಸ್ಲಿಮರಿಗೆ ಧಾರಾಳ ನಷ್ಟ ಸಂಭವಿಸಿತ್ತು. ಹಝ್ರತ್ ಸಅದ್ ಬಿನ್ ಉಬೈದ್ ಸೋತು ಹಿಂದೆ ಸರಿದಿದ್ದರು. ಹಝ್ರತ್ ಉಮರ್(ರ) ಹಝ್ರತ್ ಸಅದ್ ಬಿನ್ ಉಬೈದರೊಂದಿಗೆ ಕೇಳಿದರು: ಸಿರಿಯಾದಲ್ಲಿ ಜಿಹಾದ್ ಮಾಡಲು ಆಸಕ್ತಿ ಇದೆಯೇ? ಅಲ್ಲಿ ಮುಸ್ಲಿಮರ ಬಹಳ ರಕ್ತಪಾತವಾಗಿದೆ. ಮುಸ್ಲಿಮರಿಗೆ ಬಹಳ ಹಾನಿ ಉಂಟುಮಾಡಲಾಗಿದೆ. ಜಸದ್ ಯುದ್ಧದ ಸೋಲಿನ ಕಳಂಕವನ್ನು ನೀಗಿಸಲು ಅಲ್ಲಿಗೆ ಹೋಗಿರಿ. ಅಲ್ಲಿ ಸಹ ಯುದ್ಧ ನಡೆಯುತ್ತಿದೆ. ಹಝ್ರತ್ ಸಅದ್ ಹೇಳಿದರು: ನಾನು ಸೋತು ಮರಳಿ ಬಂದ ಸ್ಥಳದಲ್ಲಿ ಶತ್ರುಗಳ ವಿರುದ್ಧ ಹೋರಾಡಲು ಮಾತ್ರ ನಾನು ಹೊರಡುವೆನು. ಅನಂತರ ಹಝ್ರತ್ ಸಅದ್ ಖಾದಿಸಿಯಕ್ಕೆ ತೆರಳಿ ಅಲ್ಲಿ ಹೋರಾಡುತ್ತಾ ಶಹೀದರಾದರು.

ಅಬ್ದುರ್ರಹ್ಮಾನ್ ಬಿನ್ ಉಬೈದ್ ಅಬೂ ಲೈಲಾ ವರದಿ ಮಾಡುತ್ತಾರೆ: ಹಝ್ರತ್ ಸಅದ್ ಬಿನ್ ಉಬೈದ್ ಜನರಿಗೆ ಪ್ರವಚನ ನೀಡುತ್ತಾ ಹೇಳಿದರು: ನಾವು ನಾಳೆ ವಿರೋಧಿಗಳ ವಿರುದ್ಧ ಹೋರಾಡಿ ಶಹೀದರಾಗುವೆವು. ನೀವು ನಮ್ಮ ಶರೀರದಿಂದ ರಕ್ತವನ್ನು ತೊಳೆದು ಹಾಕಬಾರದು. ನಮ್ಮ ಶರೀರದಲ್ಲಿರುವ ಬಟ್ಟೆಗಳನ್ನು ಬದಲಾಯಿಸಿ ಹೊಸ ಕಫನ್ ಹಾಕಬಾರದು ಎಂದು ಹೇಳಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಸಹ್‌ಲ್ ಬಿನ್ ಅತೀಕ್(ರ). ಅವರು ಎಪ್ಪತ್ತು ಅನ್‌ಸಾರ್‌ಗಳ ಜೊತೆಗೆ ಬೈಅತೆ ಅಖಬ ಸಾನಿಯದಲ್ಲಿ ಭಾಗವಹಿಸಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಇನ್ನೊಬ್ಬ

ಸಹಾಬಿ ಹಝ್ರತ್ ಸುಹೈಲ್ ಬಿನ್ ರಾಫಿಅ್(ರ). ಅವರು ಬನೂ ನಜ್ಜಾರ್ ಗೋತ್ರಕ್ಕೆ ಸೇರಿದ್ದರು. ಮಸ್ಜಿದ್ ನಬವಿ ನಿರ್ಮಿಸಲ್ಪಟ್ಟ ಭೂಮಿ ಹಝ್ರತ್ ಸುಹೈಲ್ ಮತ್ತು ಅವರ ಸಹೋದರ ಹಝ್ರತ್ ಸಹ್ಲ್‌ರವರ ಮಾಲಿಕತ್ವಕ್ಕೆ ಸೇರಿತ್ತು. ಹಝ್ರತ್ ಸುಹೈಲ್‌ರವರು ಬದರ್, ಉಹುದ್, ಖಂದಕ್, ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಅವರು ನಿಧನ ಹೊಂದಿದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆದಿದ್ದಾರೆ: ಹಿಜ್ರತ್ ನಂತರ ಮದೀನದಲ್ಲಿ ವಾಸಿಸಲು ತೊಡಗಿದಾಗ ಎಲ್ಲದಕ್ಕಿಂತ ಮೊದಲಿನ ಕೆಲಸ ಮಸ್ಜಿದ್ ನಬವಿಯ ನಿರ್ಮಾಣವಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂಟೆ ಬಂದು ಕುಳಿತ ಸ್ಥಳ ಮದೀನದ ಇಬ್ಬರು ಮುಸ್ಲಿಮ್ ಬಾಲಕರಾದ ಸಹ್ಲ್ ಮತ್ತು ಸುಹೈಲ್‌ರ ಒಡೆತನಕ್ಕೆ ಸೇರಿತ್ತು. ಹಝ್ರತ್ ಅಸ್‌ಅದ್ ಬಿನ್ ಝುರಾರ ಅವರಿಬ್ಬರ ರಕ್ಷಕರಾಗಿದ್ದರು. ಅದು ಒಂದು ಬಂಜರು ಸ್ಥಳವಾಗಿತ್ತು. ಅದರ ಒಂದು ಭಾಗದಲ್ಲಿ ಒಂದೆರಡು ಖರ್ಜೂರದ ಮರಗಳಿದ್ದುವು. ಇನ್ನೊಂದು ಭಾಗದಲ್ಲಿ ಹಳ್ಳಕೊಳ್ಳಗಳಿದ್ದುವು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಸ್ಥಳದಲ್ಲಿ ಮಸ್ಜಿದ್ ನಿರ್ಮಿಸಲು ಮತ್ತು ತನ್ನ ನಿವಾಸಕ್ಕೆ ಕೋಣೆಗಳನ್ನು ನಿರ್ಮಿಸಲು ಬಯಸಿದರು. ಆ ಸ್ಥಳವನ್ನು ಹತ್ತು ದೀನಾರ್‌ಗೆ ಖರೀದಿಸಲಾಯಿತು. ಆ ಸ್ಥಳವನ್ನು ಸಮತಟ್ಟುಗೊಳಿಸಿ ಮತ್ತು ಮರಗಳನ್ನು ಕಡಿದು ಮಸ್ಜಿದ್ ನಿರ್ಮಾಣ ಪ್ರಾರಂಭವಾಯಿತು. ಒಂದು ವರದಿ ಪ್ರಕಾರ ಈ ಭೂಮಿಯನ್ನು ಖರೀದಿಸಿದ ಹಣವನ್ನು ಹಝ್ರತ್ ಅಬೂಬಕರ್(ರ) ನೀಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವತಃ ಪ್ರಾರ್ಥನೆ ಮಾಡಿ ಅಸ್ತಿಭಾರದ ಕಲ್ಲು ಹಾಕಿದರು. ಖುಬಾ ಮಸ್ಜಿದ್ ನಿರ್ಮಾಣದ ಸಂದರ್ಭದಲ್ಲಿ ನಡೆದ ಹಾಗೆ ಸಹಾಬರು ಕಲ್ಲು ಕಟ್ಟುವವರಾಗಿ ಮತ್ತು ಕೆಲಸಗಾರರಾಗಿ ಕಾರ್ಯ ನಿರ್ವಹಿಸಿದರು. ಕೆಲವು ಸಾರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವತಃ ಕೆಲಸಗಾರರಾಗಿ ದುಡಿಯುತ್ತಿದ್ದರು.

ಮಸ್ಜಿದ್‌ನ ಎತ್ತರ ಹತ್ತು ಅಡಿಯಷ್ಟಾಗಿತ್ತು. ಎಂದರೆ ಛಾವಣಿ ಹತ್ತು ಅಡಿ ಎತ್ತರದಲ್ಲಿತ್ತು. ಉದ್ದ ಒಂದು ನೂರ ಐದು ಅಡಿ ಮತ್ತು ಅಗಲ ತೊಂಬತ್ತು ಅಡಿಯಷ್ಟಿತ್ತು. ಮಸ್ಜಿದ್‌ನ ಒಂದು ಮೂಲೆಯಲ್ಲಿ ಒಂದು ಛಾವಣಿಯಿದ್ದ ಕೋಣೆ ನಿರ್ಮಿಸಲಾಯಿತು. ಅದನ್ನು ಸಫ್ಫ ಎಂದು ಕರೆಯುತ್ತಿದ್ದರು. ಅದು ಮನೆಗಳಿಲ್ಲದ ಬಡ ಮುಹಾಜಿರ್‌ಗಳಿಗೋಸ್ಕರವಾಗಿತ್ತು. ಅವರು ಅಲ್ಲಿಯೇ ವಾಸಿಸುತ್ತಿದ್ದರು. ಅವರು ಅಸ್‌ಹಾಬುಸ್ಸುಫ್ಫ ಎಂದು ಕರೆಯಲ್ಪಡುತ್ತಿದ್ದರು. ಮಸ್ಜಿದ್‌ಗೆ ತಾಗಿಕೊಂಡು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ವಾಸದ ಮನೆಯನ್ನು ನಿರ್ಮಿಸಲಾಗಿತ್ತು. ಅದು ಕೇವಲ ಹತ್ತು ಹದಿನೈದು ಅಡಿಗಳ ಒಂದು ಕೋಣೆಯಾಗಿತ್ತು. ಈ ಕೋಣೆ ಮತ್ತು ಮಸ್ಜಿದ್ ಮಧ್ಯೆ ಒಂದು ಬಾಗಿಲನ್ನು ಇರಿಸಲಾಗಿತ್ತು. ಅದರ ಮೂಲಕ ದಾಟಿಕೊಂಡು ನಮಾಝ್ ಮೊದಲಾದವುಗಳಿಗೋಸ್ಕರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಸ್ಜಿದ್‌ಗೆ ಆಗಮಿಸುತ್ತಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬೇರೆ ವಿವಾಹಗಳನ್ನು ಮಾಡಿದಾಗ ಈ ಕೋಣೆಗೆ ತಾಗಿಕೊಂಡು ಬೇರೆ ಕೋಣೆಗಳನ್ನು ಸಹ ನಿರ್ಮಿಸಲಾಯಿತು. ಮಸ್ಜಿದ್‌ಗೆ ಸುತ್ತುಮುತ್ತಲು ಕೆಲವು ಸಹಾಬರ ಮನೆಗಳೂ ನಿರ್ಮಿಸಲ್ಪಟ್ಟವು. ಮದೀನದಲ್ಲಿ ಈ ಮಸ್ಜಿದ್ ನಿರ್ಮಿಸಲ್ಪಟ್ಟ ಕಾಲದಲ್ಲಿ ಸಾರ್ವಜನಿಕ ಉಪಯೋಗಕ್ಕಿರುವ ಬೇರೆ ಕಟ್ಟಡಗಳಿಲ್ಲದ ಕಾರಣ ಸಾಮುದಾಯಿಕ ಆವಶ್ಯಕತೆಗಳಿಗೋಸ್ಕರ ಈ ಮಸ್ಜಿದನ್ನೇ ಬಳಸಲಾಗುತ್ತಿತ್ತು. ಸರಕಾರದ ಕೇಂದ್ರವಾಗಿಯೂ ಈ ಮಸ್ಜಿದ್ ಬಳಸಲಾಯಿತು. ಸರಕಾರದ ಕಚೇರಿಯೂ ಅದೇ ಆಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಭೆಗಳು ಸಹ ಅಲ್ಲಿಯೇ ಜರಗುತ್ತಿದ್ದುವು. ಎಲ್ಲಾ ವಿಧಗಳ ಸಲಹೆಗಳು ಸಮಾಲೋಚನೆಗಳು ಇಲ್ಲಿಯೇ ನಡೆಯುತ್ತಿದ್ದುವು. ಮೊಕದ್ದಮೆಗಳ ತೀರ್ಪು ಇಲ್ಲಿಯೇ ಆಗುತ್ತಿತ್ತು. ಇಲ್ಲಿಂದಲೇ ಆಜ್ಞೆಗಳು ಜಾರಿಯಾಗುತ್ತಿದ್ದುವು. ಇದು ಅತಿಥಿ ಗೃಹವೂ ಆಗಿತ್ತು. ಸಮಾಜಕ್ಕೆ ಸಂಬಂಧಿಸಿದ ಎಲ್ಲಾ ಕೆಲಸಗಳು ಇಲ್ಲಿಯೇ ನಡೆಯುತ್ತಿದ್ದುವು. ಆವಶ್ಯಕತೆ ತಲೆದೋರಿದಾಗ ಯುದ್ಧ ಕೈದಿಗಳ ಸೆರೆಮನೆಯಾಗಿ ಸಹ ಇದನ್ನು ಉಪಯೋಗಿಸಲಾಗುತ್ತಿತ್ತು.

ಸರ್ ವಿಲ್ಲಿಯಂ ಮ್ಯೂರ್ ಈ ಮಸ್ಜಿದ್ ಬಗ್ಗೆ ಹೀಗೆ ಬರೆದಿದ್ದಾರೆ: ಈ ಮಸ್ಜಿದ್ ಅತ್ಯಂತ ಸಾಮಾನ್ಯ ವಸ್ತುಗಳಿಂದ ನಿರ್ಮಿತವಾಗಿತ್ತಾದರೂ ಮುಹಮ್ಮದ್ (ಸಲ್ಲಾಹು ಅಲೈಹಿ ವಸಲ್ಲಮರ) ಈ ಮಸ್ಜಿದ್ ಇಸ್ಲಾಮೀ ಚರಿತ್ರೆಯಲ್ಲಿ ಒಂದು ವಿಶಿಷ್ಟ ವೈಭವ ಹೊಂದಿದೆ. ಅಲ್ಲಾಹನ ಸಂದೇಶವಾಹಕ ಮತ್ತು ಸಹಾಬರು ತಮ್ಮ ಹೆಚ್ಚಿನ ಸಮಯ ಇಲ್ಲಿಯೇ ಕಳೆಯುತ್ತಿದ್ದರು. ಇಲ್ಲಿಂದಲೇ ಇಸ್ಲಾಮೀ ನಮಾಝಿನ ಸಾಮೂಹಿಕ ಅನುಷ್ಠಾನ ಆರಂಭಗೊಂಡಿತು. ಇಲ್ಲಿಯೇ ಎಲ್ಲಾ ಮುಸ್ಲಿಮರು ಜುಮುಅ ದಿವಸ ಅಲ್ಲಾಹನ ತಾಜಾ ವಹಿಗಳನ್ನು ಆಲಿಸಲು ಜಮಾಯಿಸುತ್ತಿದ್ದರು. ಇಲ್ಲಿ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ತಮ್ಮ ವಿಜಯಗಳ ಯೋಜನೆಗಳನ್ನು ದೃಢಗೊಳಿಸುತ್ತಿದ್ದರು. ಪರಾಭವಗೊಂಡ ಮತ್ತು ಪಶ್ಚಾತ್ತಾಪಗೊಂಡ ಗೋತ್ರಗಳ ಪ್ರತಿನಿಧಿ ಸಂಘಗಳು ಅವರ ಮುಂದೆ ಹಾಜರಾಗುತ್ತಿದ್ದುದು ಇಲ್ಲಿಯೇ ಆಗಿತ್ತು. ಇದು ಎಂತಹ ಅಧಿಕಾರದ ಕೇಂದ್ರವಾಗಿತ್ತೆಂದರೆ ಇಲ್ಲಿಂದ ಹೊರಡಿಸಲಾಗುತ್ತಿದ್ದ ದೊರೆಯ ಆಜ್ಞೆಗಳು ಅರಬ್ ದೇಶದಲ್ಲಿ ದೂರ ದೂರದ ತನಕ ವಿದ್ರೋಹಿಗಳನ್ನು ಭಯದಿಂದ ನಡುಗುವಂತೆ ಮಾಡುತ್ತಿದ್ದುವು. ಇದೇ ಮಸ್ಜಿದ್ ಸಮೀಪ ತಮ್ಮ ಪತ್ನಿ ಹಝ್ರತ್ ಆಯಿಶರವರ ಕೋಣೆಯಲ್ಲಿ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮರು) ನಿಧನ ಹೊಂದಿದರು. ಇಲ್ಲಿಯೇ ತನ್ನ ಇಬ್ಬರು ಖಲೀಫರ ಗೋರಿಯ ಬದಿಯಲ್ಲಿಯೇ ಅವರು ದಫನು ಗೊಳಿಸಲ್ಪಟ್ಟಿದ್ದಾರೆ.

ಒಟ್ಟಿನಲ್ಲಿ, ಹಝ್ರತ್ ಸಹ್ಲ್ ಮತ್ತು ಹಝ್ರತ್ ಸುಹೈಲ್ ಇಸ್ಲಾಮಿನ ಈ ಬೃಹತ್ ಕೇಂದ್ರದ ನಿರ್ಮಾಣಕ್ಕೆ ಜಮೀನು ನೀಡುವ ಭಾಗ್ಯ ಗಳಿಸಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಸಅದ್ ಬಿನ್ ಖೈಸಮ್(ರ). ಅವರು ಔಸ್ ಗೋತ್ರದವರಾಗಿದ್ದರು. ಅವರ ತಾಯಿಯ ಹೆಸರು ಹಿಂದ್ ಬಿನ್ತ್ ಔಸ್. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸಅದ್ ಬಿನ್ ಖೈಸಮ್ ಮತ್ತು ಹಝ್ರತ್ ಅಬೂ ಸಲ್ಮಾ ಬಿನ್ ಅಬ್ದುಲ್ ಅಸದ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬೈಅತೆ ಅಖಬ ಸಾನಿಯದ ಸಂದರ್ಭದಲ್ಲಿ ಮದೀನದ ಮುಸ್ಲಿಮರ ಮೇಲ್ವಿಚಾರಣೆಗೆ ನಿಶ್ಚಯಿಸಿದ ಹನ್ನೆರಡು ಮೇಲ್ವಿಚಾರಕರಲ್ಲಿ ಹಝ್ರತ್ ಸಅದ್ ಬಿನ್ ಖೈಸಮ್ ಒಬ್ಬರಾಗಿದ್ದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್ ಗ್ರಂಥದಲ್ಲಿ ಬರೆಯುತ್ತಾರೆ: ನಬವಿ ವರ್ಷ 13 ಝಿಲ್‌ಹಜ್ಜ್ ತಿಂಗಳಲ್ಲಿ ಮದೀನದ ಔಸ್ ಮತ್ತು ಖಝ್ರಜ್ ಗೋತ್ರದ ಅನೇಕ ನೂರು ಜನರು ಮಕ್ಕಕ್ಕೆ ಬಂದರು. ಅವರಲ್ಲಿ ಎಪ್ಪತ್ತು ಜನರು ಮೊದಲೇ ಮುಸ್ಲಿಮರಾಗಿದ್ದರು ಅಥವಾ ಮುಸ್ಲಿಮರಾಗಲು ಆಗ ಇಚ್ಛಿಸಿದ್ದರು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಗದಿತ ದಿನಾಂಕದಂದು ರಾತ್ರಿ ಮನೆಯಿಂದ ಒಬ್ಬನೇ ಹೊರಗೆ ಹೊರಟರು. ಮಾರ್ಗದಲ್ಲಿ ತಮ್ಮ ಚಿಕ್ಕಪ್ಪ ಅಬ್ಬಾಸರನ್ನು ತನ್ನ ಜೊತೆ ಸೇರಿಸಿಕೊಂಡರು. ಆಗ ಅಬ್ಬಾಸ್ ಮುಸ್ಲಿಮರಾಗಿರಲಿಲ್ಲವಾದರೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವವರಾಗಿದ್ದರು. ಅವರಿಬ್ಬರೂ ನಿಗದಿತ ಸ್ಥಳಕ್ಕೆ ತಲಪಿದರು. ಆಗ ಅಲ್ಲಿಗೆ ಅನ್ಸಾರ್‌ಗಳು ಒಬ್ಬೊಬ್ಬರಾಗಿ ಮತ್ತು ಇಬ್ಬಿಬ್ಬರಾಗಿ ತಲಪಿದರು. ಮೊದಲು ಅಬ್ಬಾಸ್ ಮಾತು ಆರಂಭಿಸಿದರು. ಓ ಖಝ್ರಜ್ ಗುಂಪಿನ ಜನರೇ, ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ತನ್ನ ಕುಟುಂಬದಲ್ಲಿ ಗೌರವಾನ್ವಿತರೂ ಪ್ರೀತಿಗೆ ಪಾತ್ರರೂ ಆಗಿದ್ದಾರೆ. ಅವರ ಕುಟುಂಬ ಅವರನ್ನು ಇಂದಿನ ತನಕ ಸಂರಕ್ಷಿಸಿದೆ. ಪ್ರತಿಯೊಂದು ಅಪಾಯದ ಕಾಲದಲ್ಲಿ ಅವರನ್ನು ರಕ್ಷಿಸಿದೆ. ಈಗ ಮುಹಮ್ಮದ್ ತನ್ನ ಊರನ್ನು ಬಿಟ್ಟು ನಿಮ್ಮ ಬಳಿಗೆ ಬರಲು ನಿರ್ಧರಿಸಿದ್ದಾರೆ. ನೀವು ಅವರನ್ನು ನಿಮ್ಮ ಊರಿಗೆ ಕರೆದುಕೊಂಡು ಹೋಗಲು ಇಚ್ಛಿಸುವುದಾದರೆ ನೀವು ಅವರಿಗೆ ಎಲ್ಲಾ ರೀತಿಯ ಸಂರಕ್ಷಣೆ ನೀಡಬೇಕು. ಅದಕ್ಕೆ ನೀವು ಸಿದ್ಧರಾದರೆ ಅದು ಉತ್ತಮವೇ ಆಗಿದೆ. ನೀವು ಸ್ಪಷ್ಟವಾಗಿ ಉತ್ತರ ಹೇಳಿರಿ. ಸ್ಪಷ್ಟವಾಗಿ ಹೇಳುವುದು ಉತ್ತಮವಾಗಿದೆ. ಆಗ ಅನ್ಸಾರ್‌ಗಳ ಒಬ್ಬ ಹಿರಿಯ ಮತ್ತು ಪ್ರಭಾವಶಾಲಿ ವ್ಯಕ್ತಿಯಾದ ಬರಾಅ್ ಬಿನ್ ಮಅ್‌ರೂರ್ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಪಾವನ ನಾಲಗೆಯಿಂದ ನಮ್ಮೊಂದಿಗೆ ಮಾತನಾಡಲಿ ಎಂದು ನಾವು ಬಯಸುತ್ತೇವೆ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನು ಪಠಿಸಿ ಒಂದು ಸಂಕ್ಷಿಪ್ತ ಭಾಷಣದಲ್ಲಿ ಇಸ್ಲಾಮಿನ ತತ್ವಗಳನ್ನು ವಿವರಿಸಿದರು. ಅವರು ಹುಖೂಖುಲ್ಲಾಹ್ ಮತ್ತು ಹುಖೂಖುಲ್ ಇಬಾದ್ ಬಗ್ಗೆ ವಿಶದೀಕರಿಸಿ ಹೇಳಿದರು: ನಾನು ಇಷ್ಟೇ ಆಶಿಸುತ್ತೇನೆ, ನೀವು ನಿಮ್ಮ ಸ್ನೇಹಿತರನ್ನೂ ಸಂಬಂಧಿಕರನ್ನೂ ಸಂರಕ್ಷಿಸುವ ಹಾಗೆ ಆವಶ್ಯಕತೆ ಇರುವಾಗ ನನ್ನ ಜೊತೆ ಸಹ ಹಾಗೆಯೇ ವರ್ತಿಸಿರಿ. ಬರಾಅ್ ಬಿನ್ ಮಅ್‌ರೂರ್ ಅರಬ್ ಸಂಪ್ರದಾಯ ಪ್ರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ನಿಮ್ಮನ್ನು ಸತ್ಯದೊಂದಿಗೆ ನಿಯೋಜಿಸಿದ ಅಲ್ಲಾಹನಾಣೆ, ನಾವು ನಮ್ಮ ಜೀವವನ್ನು ಸಂರಕ್ಷಿಸುವ ಹಾಗೆ ನಿಮ್ಮನ್ನು ಸಂರಕ್ಷಿಸುವೆವು. ನಾವು ಖಡ್ಗಗಳ ನೆರಳಲ್ಲಿ ಬೆಳೆದವರಾಗಿದ್ದೇವೆ.

ಅನಂತರ ಆ ಜನರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಕೇಳಿದರು: ನಾವು ನಿಮಗೋಸ್ಕರ ಎಲ್ಲವನ್ನೂ ಮಾಡುವೆವು. ಆದರೆ ಅದಕ್ಕೆ ಬದಲಾಗಿ ನಮಗೆ ಏನು ಸಿಗುವುದು? ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಿಮಗೆ ಅಲ್ಲಾಹನಿಂದ ಸ್ವರ್ಗ ಸಿಗುವುದು. ಅದು ಎಲ್ಲಾ ಬಹುಮಾನಗಳಿಗಿಂತ ದೊಡ್ಡದಾದ ಬಹುಮಾನವಾಗಿದೆ. ಆಗ ಎಲ್ಲರೂ ಹೇಳಿದರು: ನಮಗೆ ಈ ಒಪ್ಪಂದ ಅಂಗೀಕಾರಾರ್ಹವಾಗಿದೆ. ಯಾ ರಸೂಲುಲ್ಲಾಹ್ ತಾವು ತಮ್ಮ ಕೈಯನ್ನು ಮುಂದಕ್ಕೆ ಚಾಚಿರಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೈ ಚಾಚಿದಾಗ ಜೀವಾರ್ಪಣೆ ಮಾಡಲು ಸಿದ್ಧರಾದ ಆ ಎಪ್ಪತ್ತು ಜನರು ಭದ್ರತೆ ನೀಡುವ ಒಪ್ಪಂದಕ್ಕೆ ಸಂಬಂಧಿಸಿ ಬೈಅತ್ ಮಾಡಿದರು. ಈ ಬೈಅತನ್ನು ಬೈಅತ್ ಅಖಬ ಸಾನಿಯ ಎಂದು ಕರೆಯುತ್ತಾರೆ. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಲ್ಲಿ ಹನ್ನೆರಡು ಜನರನ್ನು ನಖೀಬ್ (ಮೇಲ್ವಿಚಾರಕ)ರನ್ನಾಗಿ ನೇಮಿಸಿದರು. ಅವರ ಹೆಸರುಗಳು ಹೀಗಿವೆ: ಅಸ್‌ಅದ್ ಬಿನ್ ಝುರಾರ, ಉಸೈದ್ ಬಿನ್ ಹಝೀರ್, ಅಬುಲ್ ಹೈಸಮ್ ಮಾಲಿಕ್ ಬಿನ್ ತಯ್‌ಹಾನ್, ಸಅದ್ ಬಿನ್ ಉಬಾದ, ಬರಾಅ್ ಬಿನ್ ಮಅ್‌ರೂರ್, ಅಬ್ದುಲ್ಲಾ ಬಿನ್ ರವಾಹ, ಉಬಾದ ಬಿನ್ ಸಾಮಿತ್, ಸಅದ್ ಬಿನ್ ರಬೀಅ್, ರಾಫಿಅ್ ಬಿನ್ ಮಾಲಿಕ್, ಅಬ್ದುಲ್ಲಾ ಬಿನ್ ಅಮರ್, ಸಅದ್ ಬಿನ್ ಖೈಸಮ್ ಮತ್ತು ಮುಂಝಿರ್ ಬಿನ್ ಅಮರ್.

ಹಝ್ರತ್ ಸಅದ್ ಬಿನ್ ಖೈಸಮರಿಗೆ ಖುಬಾದಲ್ಲಿ ಒಂದು ಬಾವಿ ಇತ್ತು. ಅಲ್‌ಗರಸ್ ಎಂಬ ಹೆಸರಿನ ಈ ಬಾವಿಯಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀರು ಕುಡಿಯುತ್ತಿದ್ದರು. ಅವರು ಹೇಳುತ್ತಿದ್ದರು: ಇದು ಸ್ವರ್ಗದ ನೀರಿನ ಕಾರಂಜಿಗಳಲ್ಲಿ ಒಂದಾಗಿದೆ. ಇದರ ನೀರು ಅತ್ಯುತ್ತಮವಾಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದಾಗ ಇದೇ ಭಾವಿಯ ನೀರನ್ನು ಬಳಸಿ ಅವರ ಮಯ್ಯತಿಗೆ ಸ್ನಾನ ಮಾಡಿಸಲಾಯಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು, ನಾನು ನಿಧನ ಹೊಂದಿದರೆ ಗರಸ್ ಬಾವಿಯಿಂದ ಏಳು ಕೊಡಗಳಷ್ಟು ನೀರು ತಂದು ಅದರಿಂದ ನನಗೆ ಸ್ನಾನ ಮಾಡಿಸಬೇಕು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮೂರು ಸಾರಿ ಸ್ನಾನ ಮಾಡಿಸಲಾಗಿತ್ತು. ಹಝ್ರತ್ ಅಲಿ(ರ), ಹಝ್ರತ್ ಅಬ್ಬಾಸ್(ರ) ಮತ್ತು ಹಝ್ರತ್ ಫಝ್ಲ್(ರ) ಅವರಿಗೆ ಸ್ನಾನ ಮಾಡಿಸಿದರು.

ಸುಲೈಮಾನ್ ಬಿನ್ ಅಬಾಸ್(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಬದರ್ ಯುದ್ಧಕ್ಕೆ ಹೊರಟಾಗ ಹಝ್ರತ್ ಸಅದ್ ಬಿನ್ ಖೈಸಮ್ ಮತ್ತು ಅವರ ಪಿತ, ಇಬ್ಬರೂ ಜೊತೆಗೆ ಹೋಗಲು ನಿರ್ಧರಿಸಿದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಇಬ್ಬರಲ್ಲಿ ಒಬ್ಬ ಮಾತ್ರ ಹೋಗಬಹುದು. ಚೀಟಿ ಎತ್ತಿ ಯಾರು ಹೋಗಬೇಕೆಂದು ನಿರ್ಧರಿಸಿರಿ. ಆಗ ಹಝ್ರತ್ ಖೈಸಮ್ ತನ್ನ ಪುತ್ರ ಸಅದ್‌ನೊಂದಿಗೆ ಹೇಳಿದರು: ನಮ್ಮಿಬ್ಬರಲ್ಲಿ ಒಬ್ಬ ಮಾತ್ರ ಯುದ್ಧಕ್ಕೆ ಹೋಗಲು ಅನುಮತಿ ಇರುವುದರಿಂದ ನೀನು ಮಹಿಳೆಯರ ಸಂರಕ್ಷಣೆಗೆ ಇಲ್ಲಿ ನಿಲ್ಲು. ಆಗ ಹಝ್ರತ್ ಸಅದ್ ಹೇಳಿದರು: ಸ್ವರ್ಗದ ಹೊರತು ಬೇರೆ ಯಾವುದಾದರೂ ವಿಷಯವಾಗಿದ್ದರೆ ಖಂಡಿತವಾಗಿ ನಾನು ತಮಗೆ ಆದ್ಯತೆ ನೀಡುತ್ತಿದ್ದೆ. ಆದರೆ ನಾನು ಶಹಾದತ್ ಇಚ್ಛಿಸುವವನಾಗಿದ್ದೇನೆ. ಆಗ ಚೀಟಿ ಎತ್ತಲಾಯಿತು. ಹಝ್ರತ್ ಸಅದರ ಹೆಸರು ಬಂದ ಕಾರಣ ಅವರು ಬದರ್ ಯುದ್ಧಕ್ಕೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಹೊರಟರು ಮತ್ತು ಬದರ್ ಯುದ್ಧದಲ್ಲಿ ಭಾಗವಹಿಸಿ ಶಹೀದರಾದರು.

ಒಂದು ವರದಿ ಪ್ರಕಾರ ಬದರ್ ಯುದ್ಧದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಎರಡು ಕುದುರೆಗಳಿದ್ದುವು. ಒಂದು ಕುದುರೆ ಮೇಲೆ ಹಝ್ರತ್ ಮುಸ್ಅಬ್ ಬಿನ್ ಉಮೈರ್ ಮತ್ತು ಇನ್ನೊಂದರ ಮೇಲೆ ಹಝ್ರತ್ ಸಅದ್ ಬಿನ್ ಖೈಸಮ್ ಸವಾರಿ ಮಾಡುತ್ತಿದ್ದರು. ಹಝ್ರತ್ ಝುಬೈರ್ ಬಿನ್ ಅವಾಮ್, ಹಝ್ರತ್ ಮಿಖ್‌ದಾದ್ ಬಿನ್ ಅಸ್‌ವದ್ ಸಹ ಒಬ್ಬರ ನಂತರ ಒಬ್ಬರಾಗಿ ಆ ಕುದುರೆಯ ಮೇಲೆ ಸವಾರಿ ಮಾಡುತ್ತಿದ್ದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರ ಅಭಿಪ್ರಾಯ ಪ್ರಕಾರ ಬದರ್ ಯುದ್ಧದಲ್ಲಿ ಮುಸ್ಲಿಮರ ಸೈನ್ಯದಲ್ಲಿ ಎಪ್ಪತ್ತು ಒಂಟೆಗಳು ಮತ್ತು ಎರಡು ಕುದುರೆಗಳಿದ್ದುವು. ಮುಸ್ಲಿಮರು ಹೊಂದಿದ್ದ ಯುದ್ಧ ಸಾಮಗ್ರಿಗಳು, ಕುದುರೆ, ಒಂಟೆ ಮೊದಲಾದುವು ಅವಿಶ್ವಾಸಿಗಳ ಯುದ್ಧ ಸಾಮಗ್ರಿಗಳಿಗೆ ಹೋಲಿಸಿ ನೋಡಿದರೆ ಅವು ಬಹಳ ಕಡಿಮೆಯಾಗಿದ್ದುವು. ಆದರೆ ಮುಸ್ಲಿಮರ ವಿರುದ್ಧ ಆಕ್ರಮಣ ನಡೆದಾಗ ಮತ್ತು ಶತ್ರುಗಳಿಂದ ಯುದ್ಧ ಹೇರಲ್ಪಟ್ಟಾಗ ಮತ್ತು ಇಸ್ಲಾಮನ್ನು ಕೊನೆಗೊಳಿಸಲು ತಮ್ಮ ಯೋಚನೆ ಪ್ರಕಾರ ಶತ್ರುಗಳು ಆಗಮಿಸಿದಾಗ ಸತ್ಯವಿಶ್ವಾಸಿಗಳು ತಮ್ಮ ಯುದ್ಧ ಸಾಮಗ್ರಿಗಳ ಕಡೆಗೆ ನೋಡಲಿಲ್ಲ. ಕುದುರೆಗಳ ಸಂಖ್ಯೆಯ ಕಡೆಗೆ ನೋಡಲಿಲ್ಲ. ಅವರಿಗೆ ಅಲ್ಲಾಹನಿಗೋಸ್ಕರ ಜೀವ ಬಲಿದಾನ ನೀಡುವ ಉತ್ಸಾಹವಿತ್ತು. ಅಲ್ಲಾಹನು ಅದನ್ನು ಅಂಗೀಕರಿಸಿ ಅವರಿಗೆ ಜಯ ನೀಡಿದನು. ಅಲ್ಲಾಹನು ಪ್ರತಿಕ್ಷಣ ಅವರ ಪದವಿಗಳನ್ನು ಉನ್ನತಗೊಳಿಸಲಿ – ಆಮೀನ್.

—————————*****—————————


***Friday Sermon delivered by Hadrath Khaleefatul Masih Al Khamis*** *(atba)*

*At,Masjid Baithul Futhuh London, UK. On 15-03-2019.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim |***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon